ವಿಷಯ:- ಬೆಂಗಳೂರು ನಗರದಲ್ಲಿರುವ ಗಾರ್ಮೆಂಟ್ಸ್‌ನಲ್ಲಿ ಕೆಲಸ ಮಾಡುವ ಮಹಿಳಾ ಕಾರ್ಮಿಕರ ಕುರಿತು.

1232 (1715) ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ):- ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಂಗಳೂರು ನಗರದಲ್ಲಿ ಎಷ್ಟು ಸಿದ್ಧ ಉಡುಪು (ಗಾರ್ಮೆಂಟ್ಸ್) ಘಟಕಗಳಿವೆ?

ಆ) ಇವುಗಳಲ್ಲಿ ಎಷ್ಟು ಮಹಿಳಾ ಕಾರ್ಮಿಕರು ದುಡಿಯುತ್ತಿದ್ದಾರೆ?

ಇ) ಈ ಮಹಿಳಾ ಕಾರ್ಮಿಕರಿಗೆ ಕನಿಷ್ಠ ಕೂಲಿ ಇಎಸ್‌ಐ, ಭವಿಷ್ಯ ನಿಧಿ, ಇತರೆ ಸೌಲಭ್ಯಗಳನ್ನು ಒದಗಿಸಲಾಗಿದೆಯೇ?

ಈ) ಈ ಗಾರ್ಮೆಂಟ್ಸ್ ಕಾರ್ಖಾನೆಗಳಿಗೆ ಫ್ಯಾಕ್ಟರಿ ಕಾಯ್ದೆಯು ಅನ್ವಯಿಸುವುದೇ?

ಶ್ರೀ ಬಿ. ಸತ್ಯನಾರಾಯಣ(ಕಾರ್ಮಿಕ ರಾಜ್ಯ ಸಚಿವರು):-

ಅ) 623 ಸಿದ್ಧ ಉಡುಪು ಘಟಕಗಳಿವೆ.

ಆ) 59,361 ಮಹಿಳಾ ಕಾರ್ಮಿಕರು ದುಡಿಯುತ್ತಿದ್ದಾರೆ.

ಇ) ಹೌದು

ಈ) ಹೌದು

ವಿಷಯ:- ರಾಜ್ಯದಲ್ಲಿ ಮೀನುಗಾರಿಕಾ ಅಭಿವೃದ್ಧಿ.

1240 (2295) ಶ್ರೀ ಯು.ಆರ್. ಸಭಾಪತಿ (ಉಡುಪಿ):- ಮಾನ್ಯ ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಮೀನುಗಾರಿಕಾ ಅಭಿವೃದ್ಧಿ ನಿಗಮವು 1993-94, 1994-95, 1996-97ರಲ್ಲಿ ಎಷ್ಟು ಲಾಭಗಳಿಸಿದೆ, ಲಾಭಗಳಿಸಿಲ್ಲವಾದರೆ ಕಾರಣಗಳೇನು?

ಆ) ಏಕಸದಸ್ಯ ಆಯೋಗದ ವರದಿ ಸರ್ಕಾರಕ್ಕೆ ನೀಡಿ ಎಷ್ಟು ಸಮಯವಾಯಿತು ಹಾಗೂ ಈ ಬಗ್ಗೆ ಸರ್ಕಾರದವರು ತೆಗೆದುಕೊಂಡ ಕ್ರಮಗಳೇನು?

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ (ಮೀನುಗಾರಿಕಾ ಮತ್ತು ಬಂದರು ರಾಜ್ಯ ಸಚಿವರು):-

ಅ) ರಾಜ್ಯದಲ್ಲಿನ ಕರ್ನಾಟಕ ಮೀನುಗಾರಿಕೆ ಅಭಿವೃದ್ಧಿ ನಿಗಮವು 1993-94 ಮತ್ತು 1994-95ರಲ್ಲಿ ಲಾಭಗಳಿಸಿರುವುದಿಲ್ಲ. 1996-97ರ ಆರ್ಥಿಕ ವರ್ಷದ ಆದಾಯದ ಪೂರ್ಣ ವಿವರ 1997ರ ಮಾರ್ಚ್ ಮಾಹೆಯ ನಂತರವಷ್ಟೇ ಲಭ್ಯವಾಗುವುದರಿಂದ ಹಾಲಿ ಲಾಭ ನಷ್ಟದ ವಿವರ-ಗಳು ಲಭ್ಯವಿರುವುದಿಲ್ಲ.

1993-94 ಮತ್ತು 1994-95ನೇ ಸಾಲಿನಲ್ಲಿ ರಾಜ್ಯದ ಮೀನುಗಾರಿಕಾ ಅಭಿವೃದ್ಧಿ ನಿಗಮವು

ಲಾಭಗಳಿಸದೇ ಇರುವುದಕ್ಕೆ ಮುಖ್ಯ ಕಾರಣಗಳು ಈ ಕೆಳಕಂಡಂತೆ ಇರುವುದು:

1) ನಿಗಮದ ಸ್ಥಾವರಗಳು ಬಹಳ ಹಳೆಯವಾಗಿದ್ದು, ಯಂತ್ರೋಪಕರಣಗಳ ಕಾರ್ಯಕ್ಷಮತೆ ಕುಂಠಿತಗೊಂಡಿದೆ.

2) ಯಂತ್ರೋಪಕರಣಗಳ ವಿದ್ಯುಚ್ಛಕ್ತಿಯ ಬಳಕೆ ಮತ್ತು ದರ ಹೆಚ್ಚಿದ್ದು, ಇದಕ್ಕೆ ತಗಲುವ ವೆಚ್ಚವೂ ಹೆಚ್ಚಾಗಿದೆ.

3) ಯಂತ್ರೋಪಕರಣಗಳ ದುರಸ್ಥಿ, ಬಿಡಿಭಾಗಗಳ ಜೋಡಣೆ ಮತ್ತಿತರ ಕಾರಣಗಳಿಂದ ನಿರ್ವಹಣಾ ವೆಚ್ಚದಲ್ಲಿ ಹೆಚ್ಚಳವು ಉಂಟಾಗಿದೆ.

4) ನಿಗಮದ ಯೋಜಿತ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ದುಡಿಮೆ ಬಂಡವಾಳದ ಕೊರತೆ, ಬ್ಯಾಂಕಿಗೆ ಪಾವತಿಸುತ್ತಿರುವ ಹೆಚ್ಚಿನ ಬಡ್ಡಿ ಹಾಗೂ ಹೆಚ್ಚಿದ ಆಡಳಿತ ವೆಚ್ಚ ಹೊರೆ.

ಆ) ಕರ್ನಾಟಕ ಮೀನುಗಾರಿಕೆ ಅಭಿವೃದ್ಧಿ ನಿಗಮವು ತನ್ನ ಸ್ಥಾವರಗಳ ಆರ್ಥಿಕ ಮತ್ತು ತಾಂತ್ರಿಕ ಸಮೀಕ್ಷೆಗಾಗಿ ಪ್ರೊ. ಪಿ.ಕೆ. ಸಾಲ್ಯಾನ್‌ರವರ ನೇತೃತ್ವದಲ್ಲಿ ಏಕಸದಸ್ಯ ಸಮಿತಿಯನ್ನು ನೇಮಕಗೊಳಿಸಿದ್ದು, ಅವರು ತಮ್ಮ ವರದಿಯನ್ನು ನವಂಬರ್, 1995ರಲ್ಲಿ ಸಲ್ಲಿಸಿರುತ್ತಾರೆ. ಅವರ ಶಿಫಾರಸ್ಸುಗಳು ಸರ್ಕಾರದವರ ತೀವ್ರ ಪರಿಶೀಲನೆಯಲ್ಲಿದೆ.

ವಿಷಯ:- ಮುಳಬಾಗಿಲು ತಾಲ್ಲೂಕಿನಲ್ಲಿ ಕೆ.ಇ.ಬಿ. ಉಪವಿಭಾಗ ಸ್ಥಾಪನೆ.

327 (2191) **ಶ್ರೀ ಆರ್. ಶ್ರೀನಿವಾಸ್ (ಮುಳಬಾಗಿಲು):-** ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಆ) ಮುಳಬಾಗಿಲು ತಾಲ್ಲೂಕಿನಲ್ಲಿ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ಉಪ ವಿಭಾಗವನ್ನು ಪ್ರಾರಂಭಿಸುವ ವಿಷಯ ಯಾವ ಹಂತದಲ್ಲಿದೆ?

ಶ್ರೀ ಶರಣಪ್ಪ ಬಸಪ್ಪ ದರ್ಶನಾಪುರ್ (ಇಂಧನ ರಾಜ್ಯ ಸಚಿವರು):-

ಆ) ಮುಳಬಾಗಿಲು ತಾಲ್ಲೂಕಿಗೆ ಮುಳಬಾಗಿಲಿನಲ್ಲಿ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ಒಂದು ಉಪ ವಿಭಾಗವು 1975ರ ವರ್ಷದಿಂದಲೇ ಕಾರ್ಯ ನಿರ್ವಹಿಸುತ್ತಿದೆ.

ಪ್ರಸ್ತುತ ಮುಳಬಾಗಿಲು ತಾಲ್ಲೂಕಿಗೆ ಮತ್ತೊಂದು ಉಪ ವಿಭಾಗವನ್ನು ತೆರೆಯುವ ಅವಶ್ಯಕತೆ ಇರುವುದಿಲ್ಲ.

ವಿಷಯ:- 1995-96ನೇ ಸಾಲಿನಲ್ಲಿ ರಾಜ್ಯದ ನೀರಾವರಿ ಯೋಜನೆಗೆ ನಬಾರ್ಡ್ ಸಾಲ ನೀಡಿರುವುದು.

1255 (2009) **ಶ್ರೀ ಜಗದೀಶ್ ಶೆಟ್ಟರ (ಹುಬ್ಬಳ್ಳಿ ಗ್ರಾಮೀಣ):-** ಮಾನ್ಯ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?